27-05-1996	2	2
29-05-1996	11	4
28-05-1996	2	1
ಒಟ್ಟು:	55	16
ಜೂನ್ - 1996		
07-06-1996	9	2
12-06-1996	26	8
18-06-1996	10	3
27-06-1996	10	1
ಒಟ್ಟು:	55	14
ಒಟ್ಟು:	560	260

ವಿಷಯ:- ಕೋಟೇಶ್ವರ - ಸೋಮೇಶ್ವರ ರಸ್ತೆಯ ಡಾಂಬರೀಕರಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 618 (1377)

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಟೇಶ್ವರ - ಸೋಮೇಶ್ವರ ರಾಜ್ಯ ರಸ್ತೆಯ ಅಲ್ವಾಡಿಯಿಂದ ಸೋಮೇಶ್ವರದ ತನಕ ರಸ್ತೆಯು ಕಾರ್ಕಳ ವಿಭಾಗಕ್ಕೆ ಹೋಗಿದ್ದು ನಾದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ದುರಸ್ತಿಗೊಳಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಕೋಟೇಶ್ವರ - ಸೋಮೇಶ್ವರ ರಾಜ್ಯ ಹೆದ್ದಾರಿಯ ಭಾಗವಾದ ಅಲ್ವಾಡಿಯಿಂದ ಸೋಮೇಶ್ವರ ತನಕ ರಸ್ತೆಯು ಕಾರ್ಕಳದ ಲೋಕೋಪಯೋಗಿ ಉಪ ವಿಭಾಗದ ವ್ಯಾಪ್ತಿಯಲ್ಲಿದ್ದು, ರಸ್ತೆಯು ಸುಸ್ಥಿತಿಯಲ್ಲಿರುತ್ತದೆ. ಈ ಭಾಗವು ಡಾಂಬರಿನ ಮೇಲ್ಪೈ ಹೊಂದಿದ್ದು ಸೂಕ್ತವಾಗಿ ನಿರ್ವಹಿಸಲಾಗುತ್ತಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ಕುಂದಾಪುರ ತಾಲ್ಲೂಕಿನ ಕೋಡಿಯಲ್ಲಿ ಮೀನುಗಾರಿಕಾ ಜಟ್ಟಿ ನಿರ್ಮಾಣ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 619 (1375)

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ):- ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನ ಕೋಡಿಯಲ್ಲಿ ಮೀನುಗಾರಿಕಾ ಜಟ್ಟಿ ಮಾಡುವ ಯೋಜನೆ ಸರ್ಕಾರದವರ ಮುಂದಿದೆಯೇ?

ಆ) ಇಲ್ಲದಿದ್ದಲ್ಲಿ ಯಾವ ಬದಲಿ ವ್ಯವಸ್ಥೆ ಮಾಡಲಾಗುವುದು?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):-

ಅ) ಇಲ್ಲ.

ಆ) ಇದೇ ತಾಲ್ಲೂಕಿನಲ್ಲಿ ಕುಂದಾಪುರ ಕೋಡಿ ಹತ್ತಿರವಿರುವ ಗಂಗೊಳ್ಳಿಯಲ್ಲಿ ಮೀನುಗಾರಿಕಾ ಜಟ್ಟಿ : ಧಕ್ಕೆ ನಿರ್ಮಿಸಲು ಉದ್ದೇಶಿಸಲಾಗಿದೆ.

ವಿಷಯ:- ಶಾಸನ ಸಭೆ ಅಂಗೀಕರಿಸಿದ ಕಾಯಿದೆಗಳಿಗೆ ನಿಯಮಗಳ ರಚನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 620 (1502)

ಶ್ರೀ ಡಿ.ಆರ್.ಪಾಟೀಲ್ (ಗದಗ್):- ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷದ ಅವಧಿಯಲ್ಲಿ ರಾಜ್ಯ ಶಾಸನ ಸಭೆಗಳು ಅಂಗೀಕರಿಸಿದ ಎಷ್ಟು ಕಾಯ್ದೆಗಳು ನಿಯಮಗಳು (ರೂಲ್ಸ್) ರಚನೆಯಾಗದೆ ಉಳಿದಿವೆ?

ಆ) ಈ ಕಾಯ್ದೆಗಳಿಗೆ ನಿಯಮಗಳ ರಚನೆಯಾಗದಿರಲು ಕಾರಣಗಳೇನು?

ಇ) ಕಾಲಮಿತಿಗೊಳಪಟ್ಟು ಎಲ್ಲಾ ಕಾಯ್ದೆಗಳಿಗೆ ನಿಯಮಗಳನ್ನು ರಚಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-

ಅ) ಕಳೆದ ಮೂರು ವರ್ಷದ ಅವಧಿಯಲ್ಲಿ ರಾಜ್ಯ ಶಾಸನ ಸಭೆಗಳು ಅಂಗೀಕರಿಸಿದ ಮೂಲ ಕಾಯ್ದೆಗಳಲ್ಲಿ 9 ಅಧಿನಿಯಮಗಳಿಗೆ ನಿಯಮಗಳನ್ನು ರಚಿಸಲಾಗಿಲ್ಲ. ಅವುಗಳು ಎಂದರೆ:-